ದಿನಾಂಕಃ 19-01-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಮ್.ಎಮ್.ಆರ್ ವಕೀಲರಿಂದಃ**

೮. ನಾನು ಸಲ್ಲಿಸಿದ ಆದಾಯ ತೆರಿಗೆ ರಿರ್ಟನ್ಸ್ ನಲ್ಲಿ ಆರೋಪಿತನ ಜೊತೆಗೆ ಮಾಡಿದ ವ್ಯವಹಾರ ಅಂದರೆ ಅಡಮಾನ ಪತ್ರ, ಕರಾರು ಪತ್ರದ ಬಗ್ಗೆ ತೋರಿಸಿರುತ್ತೇನೆ.ನಾನು ಸಲ್ಲಿಸಿದ ಆದಾಯ ತೆರಿಗೆ ರಿರ್ಟನ್ಸ್ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು ಅದನ್ನು ಆದಾಯ ತೆರಿಗೆ ರಿರ್ಟನ್ಸ್ ನಲ್ಲಿ ತೋರಿಸಿಲ್ಲ ಕಾರಣ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಅದನ್ನು ಹಾಜರು ಪಡಿಸುತ್ತೇನೆ ಎಂದು ಹೇಳುತ್ತಾರೆ. 2017-2018 ನೇ ಸಾಲಿನಲ್ಲಿ ನಮ್ಮ ಕುಟುಂಬ ಆರ್ಥಿಕವಾಗಿ ತೊಂದರೆಯಲ್ಲಿ ಇತ್ತು ಅಂದರೆ ಸರಿ. ಆ ಮೊದಲು ಸಹ ನಾವು ಆರ್ಥಿಕವಾಗಿ ತೊಂದರೆಯಲ್ಲಿ ಇದ್ದೆವು ಅಂದರೆ ಸರಿಯಲ್ಲ. 2017-2018 ನೇ ಸಾಲಿನ ಪೂರ್ವದಲ್ಲಿ ನಾನು ಸಾಲ ಮಾಡಿದ್ದೆನು ಅಂದರೆ ಸರಿ. ಅಡಮಾನ ಪತ್ರದಂತೆ ಹಣಮರುಪಾವತಿ ಮಾಡುವಂತೆ ನಾನು ಆರೋಪಿತನಿಗೆ ನೋಟಿಸ್ ಕೊಟ್ಟಿರುದಿಲ್ಲ ಅಂದರೆ ಸರಿಯಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ನಾನು ನೋಟಿಸ್ ಕೊಟ್ಟಿಲ್ಲ ಕಾರಣ ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ. ಅಡಮಾನ ಪತ್ರದಂತೆ ನಾನು ಹಣ ಮರುಪಾವತಿ ಕೋರಿ ಆರೋಪಿತನ ವಿರುದ್ಧ ಯಾವುದೇ ದಾವೆ ಸಲ್ಲಿಸಿಲ್ಲ. ಕರಾರು ಪತ್ರ ಮತ್ತು ಅಡಮಾನ ಪತ್ರ ಜಮೀನಿನ ಭದ್ರತೆ ಸಲುವಾಗಿ ಮಾಡಿಕೊಂಡಿರುವುದರಿಂದ ನಾನು ಅವುಗಳ ಮೇಲೆ ಯಾವುದೇ ದಾವೆ ಸಲ್ಲಿಸಿಲ್ಲ ಅಂದರೆ ಸರಿಯಲ್ಲ.

೯. ಆರೋಪಿ ಯಾವುದೇ ವಿಧ್ಯಾಭ್ಯಾಸ ಮಾಡಿಲ್ಲ ಅಂದರೆ ನನಗೆ ಗೊತ್ತಿಲ್ಲ. ಆರೋಪಿತನಿಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ಆರೋಪಿ ತೆಲುಗು ಭಾಷೆಯಲ್ಲಿ ಸಹಿ ಮಾಡುತ್ತಾನೆ ಅಂದರೆ ಸರಿಯಲ್ಲ. ಆರೋಪಿ ಮತ್ತು ಅವರ ಸಹೋದರನಿಗೆ ನಮ್ಮ ಮೇಲೆ ಬಹಳ ವಿಶ್ವಾಸ ಇತ್ತು ಅಂದರೆ ನನಗೆ ಗೊತ್ತಿಲ್ಲ. ನಮ್ಮ ಜಮೀನುಗಳನ್ನು ಆರೋಪಿತನ ಸಹೋದರ ಲೀಜಿಗಾಗಿ ಪಡೆದಿದ್ದ ಅವುಗಳ ಭದ್ರತೆ ಕುರಿತು ನಾನು ಅವರಿಂದ ಚೆಕಗಳನ್ನು ಪಡೆದಿದ್ದೆನು ಅಂದರೆ ಸರಿಯಲ್ಲ. ಸಾಮಾನ್ಯವಾಗಿ 70-80 ಜಮೀನುಗಳು ಇದ್ದವರು ಯಾವುದೇ ಭದ್ರತೆ ಇಲ್ಲದೆ ತಮ್ಮ ಜಮೀನುಗಳನ್ನು ಲೀಜಿಗೆ ಕೊಡುವುದಿಲ್ಲ ಅಂದರೆ ಸರಿಯಲ್ಲ. ನಾನು ಆರೋಪಿತನಿಗೆ ಭದ್ರತೆ ಕೇಳಿದ್ದೆ ಕಾರಣ ದಿಃ02.08.2016 ರಂದು ಆರೋಪಿ ನನಗೆ ಅಡಮಾನ ಪತ್ರ ನಂಬರ್ 3500/2016-2017 ನ್ನು ಬರೆದುಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ.

ಅದೇ ದಿನ ಆರೋಪಿತನ ಸಹೋದರ ಅಡಮಾನ ಪತ್ರ ಸಂಖ್ಯೆ 3501/2016-2017 ನ್ನು ಬರೆದುಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ. ಎರಡು ಅಡಮಾನ ಪತ್ರಗಳನ್ನು ಬರೆದುಕೊಂಡರು ಸುಮಾರು 80 ಎಕರೆ ಜಮೀನಿಗೆ ಅವು ಸಾಕಾಗುವುದಿಲ್ಲ ಎಂದು ಆರೋಪಿತನಿಗೆ ಖರೀದಿಕರಾರು ಪತ್ರಗಳನ್ನು ಬರೆದುಕೊಡುವಂತೆ ಕೇಳಿದ್ದೆನು ಅಂದರೆ ಸರಿಯಲ್ಲ. ನಾನು ಹೆಚ್ಚಿನ ಭದ್ರತೆ ಕೋರಿದ್ದರಿಂದ ಆರೋಪಿತನ ಸಹೋದರ ಜೇವರಗಿ ತಾಲೂಕಿನ ಕೊನಾಹಳ್ಳಿ ಡಿ. ಗ್ರಾಮದ ತನ್ನ ಹೆಸರಿನಲ್ಲಿ ಇರುವ ಜಮೀನು ಸರ್ವೆ ನಂಬರ್ 7/2 ಕ್ಷೇತ್ರ 2 ಎಕರೆ 36 ಗುಂಟೆಗೆ ಸಂಬಂಧಿಸಿದಂತೆ ಒಂದು ಕರಾರು ಪತ್ರ ಬರೆದುಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಮೀನು ಖರೀದಿ ವ್ಯವಹಾರದ ಸಲುವಾಗಿ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತಾನೆ ಎಂದು ಹೇಳುತ್ತಾರೆ. ಅದೇ ದಿನ ಆರೋಪಿ ನನ್ನ ಹೆಂಡತಿಯ ಹೆಸರಿನಲ್ಲಿ ಜಮೀನು ಸರ್ವೆ ನಂಬರ್ 7/1 ಕ್ಷೇತ್ರ 4 ಎಕರೆ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತಾನೆ ಅಂದರೆ ಸರಿ. ದಿನಾಂಕ 24.09.2019 ರಂದು ಆರೋಪಿತನ ಸಹೋದರ ನಮ್ಮ ಒತ್ತಾಯದ ಮೇರೆಗೆ ನನ್ನ ಹೆಂಡತಿಯ ಹೆಸರಿನಲ್ಲಿ ಒತ್ತಿಪತ್ರ ಬರೆದುಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ. ಅದೇ ದಿನ ಆರೋಪಿತನ ಸಹೋದರ ನನ್ನ ಹೆಂಡತಿಯ ಹೆಸರಿನಲ್ಲಿ ಜಮೀನು ಸರ್ವೆ ನಂಬರ್ 426/*/6 ಕ್ಷೇತ್ರ 4 ಎಕರೆ ಜಮೀನಿಗೆ ಸಂಬಂಧಿಸಿದಂತೆ ಅಧಿಕಾರ ಪತ್ರ ಬರೆದುಕೊಟ್ಟಿರುತ್ತಾನೆ ಅಂದರೆ ಸರಿ. ಸದರಿ ಅಧಿಕಾರ ಪತ್ರದ ಆಧಾರದ ಮೇಲೆ ಸದರಿ ಜಮೀನನ್ನು ನಾವು ನಾರಾಯಣರಾವ್ ಇವರಿಗೆ ಮಾರಾಟ ಮಾಡಿರುತ್ತೇವೆ ಅಂದರೆ ಸರಿ. ಸದರಿ ಮಾರಾಟದ ವ್ಯವಹಾರ ಆರೋಪಿ ಹಾಗೂ ಅವರ ಸಹೋದರನಿಗೆ ಹೇಳಿರುವುದಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನನ್ನು ನಾವು ಖರೀದಿಸಿದ್ದೆವು ನಂತರ ಮಾರಾಟ ಮಾಡಿರುತ್ತೇವೆ ಎಂದು ಹೇಳುತ್ತಾರೆ. ಸದರಿ ಜಮೀನು ಮಾರಾಟ ಮಾಡಿ ಬಂದ ಪ್ರತಿಫಲ ಹಣವನ್ನು ಆರೋಪಿ ಹಾಗೂ ಅವರ ಸಹೋದರನಿಗೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಸದರಿ ಹಣ ಆರೋಪಿತನಿಗೆ ಹಾಗೂ ಅವರ ಸಹೋದರನಿಗೆ ನೀಡಿದ ಬಗ್ಗೆ ರಶೀದಿ ಹಾಜರು ಪಡಿಸುತ್ತೇನೆ.

10. ದಿನಾಂಕ 02.08.2016 ರಂದು ಆರೋಪಿತನಿಗೆ ರೂ.7,00,000/- ಗಳನ್ನು ನಮ್ಮ ಮನೆಯಲ್ಲಿ ಇದ್ದವು ಅವುಗಳನ್ನು ತೆಗೆದುಕೊಟ್ಟಿರುತ್ತೇವೆ. ಸಾಮಾನ್ಯವಾಗಿ ರೂ.7 ಲಕ್ಷ ಯಾರು ಮನೆಯಲ್ಲಿ ಇಡುವುದಿಲ್ಲ ಅಂದರೆ ಸರಿಯಲ್ಲ. ರೂ.7 ಲಕ್ಷ ಆರೋಪಿತನಿಗೆ ಯಾವ ಮುಖಬೆಲೆಯ ಎಷ್ಟು ನೋಟಗಳನ್ನು ಸಾಲದ ರೂಪದಲ್ಲಿ ಕೊಟ್ಟಿರುತ್ತೇನೆ ನೆನಪಿಲ್ಲ. 7 ಲಕ್ಷ ರೂಪಾಯಿ ಸಾಲವನ್ನು ನಾನು ಆರೋಪಿತನಿಗೆ ನಗದಿನ ರೂಪದಲ್ಲಿ ನೀಡಿರುತ್ತೇನೆ. ಆ ಸಮಯದಲ್ಲಿ ಚನ್ನಬಸಪ್ಪ ಮತ್ತು ಬಾಲಪ್ಪ ಇವರು ಸಾಕ್ಷಿದಾರರಾಗಿ ಇದ್ದರು. ಅವರನ್ನು ಸಾಕ್ಷಿ ಮಾಡಿಸುತ್ತೇನೆ. ಆರೋಪಿತನಿಗೆ ರೂ.7 ಲಕ್ಷ ಕೊಟ್ಟ ಬಗ್ಗೆ ಅದೇ ದಿನ ಅಂದರೆ ದಿನಾಂಕ 02.08.2016 ರಂದು ಅಡಮಾನ ಪತ್ರ ಬರೆಸಿಕೊಂಡಿರುತ್ತೇನೆ

ದಿನಾಂಕ 02.08.2016 ರಂದು ನಾನು ಆರೋಪಿತನಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡುವುದು ಬಾಕಿ ಇಲ್ಲ ಅಂದರೆ ಸರಿಯಲ್ಲ. ಆರೋಪಿ ಭದ್ರತೆ ಸಲುವಾಗಿ ನೀಡಿದ ಚೆಕಗಳನ್ನು ನಾನು ಮತ್ತು ನನ್ನ ಹೆಂಡತಿ ದುರುಪಯೋಗ ಪಡಿಸಿಕೊಂಡು ಆರೋಪಿ ಮತ್ತು ಅವರ ಸಹೋದರನ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. ಆರೋಪಿತನಿಗೆ 7 ಲಕ್ಷ ಸಾಲ ಕೊಡಲು ನನಗೆ ಯಾವುದೇ ಸಾಮಾರ್ಥ್ಯ ಇಲ್ಲ ಅಂದರೆ ಸರಿಯಲ್ಲ.

11. ಆರೋಪಿ ಶಾಹಪೂರು ಗ್ರಾಮದ ಮದರಕ್ಕಿ ಕ್ಯಾಂಪಿನ ನಿವಾಸಿ. ಆರೋಪಿತನ ಸರಿಯಾದ ವಿಳಾಸ ನನಗೆ ಗೊತ್ತಿಲ್ಲ ಕಾರಣ ನಿಪಿ.3 ರಲ್ಲಿ ತೋರಿಸಿದ ವಿಳಾಸ ತಪ್ಪಾಗಿರುತ್ತದೆ ಕಾರಣ ನೋಟಿಸ್ ಆರೋಪಿತನಿಗೆ ಮುಟ್ಟಿಲ್ಲ ಅಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ನಿಪಿ.3 ರಲ್ಲಿ ತಪ್ಪು ವಿಳಾಸ ತೋರಿಸಿ ಆರೋಪಿತನಿಗೆ ನೋಟಿಸ್ ಕಳುಹಿಸಿರುತ್ತೇನೆ ಅಂದರೆ ಸರಿಯಲ್ಲ. ನಿಪಿ.1 ರಲ್ಲಿ ಇರುವ ಬರವಣಿಗೆ ಆರೋಪಿತನದ್ದು ಅಲ್ಲ ಅಂದರೆ ನನಗೆ ಗೊತ್ತಿಲ್ಲ. ನಿಪಿ.1 ರಲ್ಲಿ ಬರೆದಿರುವ ಬರವಣಿಗೆ ಹಾಗೂ ಸಹಿಯ ಇಂಕ್ ವ್ಯತ್ಯಾಸ ಇದೆ ಅಂದರೆ ನನಗೆ ಗೊತ್ತಿಲ್ಲ. ನಮಗೆ ಕೊಡಬೇಕಾದ ಸಾಲದ ಮರುಪಾವತಿಗಾಗಿ ಆರೋಪಿ ನಿಪಿ.1 ರ ಚೆಕನ್ನು ಕೊಟ್ಟಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

**ಓ.ಹೇ.ಕೆ.ಸರಿ ಇದೆ**

**ಪ್ರ.ದ.ನ್ಯಾ.ದಂ.ಗಳು,ಮಾನ್ವಿ**